ಇನ್ನುಳಿದ ಖಾಲಿ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ರೈತರನ್ನು ಚೀನಾ / ಇಸ್ರೇಲ್ ಪ್ರವಾಸಕ್ಕೆ ಕಳುಹಿಸುವುದು

437; ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್)

ಅ) ರಾಜ್ಯದಲ್ಲಿ ರೈತರುಗಳನ್ನು ಚೀನಾ / ಇಸ್ರೇಲ್ ದೇಶಗಳಿಗೆ ಅಧ್ಯಯನ ಪ್ರವಾಸಕ್ಕೆ ಕಳುಹಿಸುವ ಯೋಜನೆಯನ್ನು ತೋಟಗಾರಿಕೆ ಇಲಾಖೆ ಹಮ್ಮಿಕೊಂಡಿದೆಯೇ;

ಆ) ಹಾಗಿದ್ದಲ್ಲಿ ಈ ಯೋಜನೆಯ ರೂಪುರೇಷೆಗಳೇನು;

ಇ) ಪ್ರತಿ ವರ್ಷ ಎಷ್ಟು ರೈತರನ್ನು ಈ ದೇಶಗಳಿಗೆ ಕಳುಹಿಸಲಾಗುವುದು;

ಈ) ರೈತರನ್ನು ಆಯ್ಕೆ ಮಾಡುವ ಮಾನದಂಡವೇನು;

ಉ) ಇದಕ್ಕೆ ಪ್ರತಿವರ್ಷ ಖರ್ಚಾಗುವ ಹಣವೆಷ್ಟು;

ಊ) ಈ ಯೋಜನೆಯನ್ನು ಯಾವಾಗ ಅನುಷ್ಠಾನಗೊಳಿಸಲಾಗುವುದು?

ಡಾ॥ ಶಾಮನೂರು ಶಿವಶಂಕರಪ್ಪ (ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು)

ಅ) ಹೌದು.

ಆ) ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಮಾನವ ಸಂಪನ್ಮೂಲ ಅಭಿವೃದ್ಧಿ ಘಟಕದಡಿ ರೈತರಿಗೆ ವಿದೇಶ ಅಧ್ಯಯನ ಪ್ರವಾಸ ಕಾರ್ಯಕ್ರಮವು ಭಾರತ ಸರ್ಕಾರ, ನವದೆಹಲಿಯಿಂದ ಅನುಮೋದನೆಯಾಗಿರುತ್ತದೆ.

ಸದರಿ ಕಾರ್ಯಕ್ರಮದಡಿ ರಾಜ್ಯದ ಎಲ್ಲಾ ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು, ಜಿಪಂ ರವರ ಮುಖಾಂತರ ಪ್ರಗತಿಪರ ರೈತ ಮತ್ತು ರೈತ ಮಹಿಳೆಯರನ್ನು ಮಾರ್ಗಸೂಚಿ ಪ್ರಕಾರ

ಆಯ್ಕೆ ಮಾಡಿ ಶಿಫಾರಸ್ಸಿನೊಂದಿಗೆ ನಿರ್ದೇಶನಾಲಯಕ್ಕೆ ಸಲ್ಲಿಸಲಾಗುತ್ತದೆ. ತದನಂತರ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಬಂದಂತಹ ರೈತ ಮತ್ತು ರೈತ ಮಹಿಳೆಯರ ಪಟ್ಟಿಯನ್ನು ಸಿದ್ದಪಡಿಸಿ ಸರ್ಕಾರದ ಅನುಮೋದನೆ ಪಡೆದುಕೊಂಡ ನಂತರ ಆಯ್ಕೆಯಾದ ರೈತರನ್ನು ವಿದೇಶ ಅಧ್ಯಯನ ಪ್ರವಾಸಕ್ಕೆ ಕಳುಹಿಸಲಾಗುವುದು.

ಇ) ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ ಯೋಜನೆಯ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಉಪಯೋಜನೆ ಭಾರತ ಸರ್ಕಾರ ನವದೆಹಲಿಯಿಂದ ರೈತರಿಗೆ ವಿದೇಶ ಅಧ್ಯಯನ ಪ್ರವಾಸ ಕಾರ್ಯಕ್ರಮಕ್ಕಾಗಿ ಅನುಮೋದನೆಯಾದ ದರಕ್ಕೆ ಅನುಗುಣವಾಗಿ ರೈತರನ್ನು ವಿದೇಶ ಅಧ್ಯಯನ ಪ್ರವಾಸಕ್ಕೆ ಕಳುಹಿಸಲಾಗುತ್ತದೆ. ವಿದೇಶ ಅಧ್ಯಯನ ಪ್ರವಾಸ ಕೈಗೊಂಡಿರುವ ರೈತರ ಸಂಖ್ಯೆ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ವರ್ಷ	ರೈತರ ಸಂಖ್ಯೆ
1	2011–12	53
2	2012–13	49
3	2013–14	66
4	2014–15	ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿದೆ
ಒಟ್ಟು		**168**

ಈ) ಜಿಲ್ಲೆಗೆ ನಿಗಧಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಗೆ ಅನುಗುಣವಾಗಿ ತೋಟಗಾರಿಕೆ ಉಪ ನಿರ್ದೇಶಕರ ಶಿಫಾರಸ್ಸಿನೊಂದಿಗೆ ರೈತರ ಹೆಸರು, ವಿಳಾಸ, ಬೆಳೆಯುತ್ತಿರುವ ತೋಟಗಾರಿಕೆ ಬೆಳೆಗಳು, ಜಮೀನಿನ ಸರ್ವೆ ನಂ. ಹುಟ್ಟಿದ ದಿನಾಂಕ, ವಯಸ್ಸು, ವಿದ್ಯಾರ್ಹತೆ ಮತ್ತು ಪಾಸ್‌ಪೋರ್ಟ್

ವಿವರಗಳನ್ನು ಕರ್ನಾಟಕ ರಾಜ್ಯ ತೋಟಗಾರಿಕೆ ಮಿಷನ್ ಕಛೇರಿಗೆ ಸಲ್ಲಿಸಬೇಕು.

ವಿದೇಶ ಪ್ರವಾಸಕ್ಕೆ ಶಿಫಾರಸ್ಸು ಮಾಡುವ ರೈತರು ಸ್ವತಃ ಕೃಷಿಕರಾಗಿದ್ದು ತೋಟಗಾರಿಕೆಯಲ್ಲಿ ತಮ್ಮನ್ನು ತೊಡಿಸಿಕೊಂಡಿರಬೇಕು

ತೋಟಗಾರಿಕೆ ಬೆಳೆಗಳ ಕೃಷಿಕರಾಗಿರುವುದಕ್ಕೆ ಸಮರ್ಥನೆಯಾಗಿ ಅವರ ಹೆಸರಿನಲ್ಲಿರುವ ಪಹಣಿ / ಜಮೀನಿನ ದಾಖಲೆಗಳನ್ನು ಒದಗಿಸಬೇಕು.

ಆಯ್ಕೆಗೆ ಪರಿಗಣಿಸುವ ರೈತ ಫಲಾನುಭವಿಯ ವಯೋಮಿತಿ ಕನಿಷ್ಠ 25 ಕ್ಕಿಂತ ಕಡಿಮೆ ಹಾಗೂ ಗರಿಷ್ಠ 60 ವರ್ಷಗಳು ಮೀರಿರಬಾರದು.

ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ. ಇರಬೇಕು ಹಾಗೂ ಆಂಗ್ಲಭಾಷೆಯನ್ನು ಅರ್ಥ ಮಾಡಿಕೊಳ್ಳುವವರಾಗಿ ಇರಬೇಕು.

ತೋಟಗಾರಿಕೆಯ ಆವಿಷ್ಕಾರಗಳನ್ನು ಬಲ್ಲವರಾಗಿದ್ದು, ನೂತನ ತಂತ್ರಜ್ಞಾನಗಳನ್ನು ತಮ್ಮ ಜಮೀನಿನಲ್ಲಿ ಅಳವಡಿಸಿಕೊಂಡಿರಬೇಕು ಅಥವಾ ಅಳವಡಿಸಿಕೊಳ್ಳಲು ಆಸಕ್ತರಿರಬೇಕು.

ತೋಟಗಾರಿಕೆ ಇಲಾಖೆ, ಕೃಷಿ ವಿಶ್ವ ವಿದ್ಯಾನಿಲಯ, ತೋಟಗಾರಿಕೆ ವಿಶ್ವ ವಿದ್ಯಾನಿಲಯ. ಕೃಷಿ ವಿಜ್ಞಾನ ಕೇಂದ್ರ, ಸಂಶೋಧನಾ ಸಂಸ್ಥೆಗಳು ಹಾಗೂ ತೋಟಗಾರಿಕೆ ಸಂಬಂಧಿಸಿದ ಇತರ ಸಂಘ ಸಂಸ್ಥೆಗಳು ನಡೆಸುವ ವಿಚಾರ ಸಂಕಿರಣಗಳು, ರೈತರ/ಕೃಷಿ/ತೋಟಗಾರಿಕೆ ಮೇಳ, ಪ್ರದರ್ಶನ, ಕಾರ್ಯಗಾರ ಇತ್ಯಾದಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿರುವ ರೈತರಿಗೆ ಆದ್ಯತೆ ನೀಡಬೇಕು.

ತೋಟಗಾರಿಕೆ ಸಂಬಂಧಿತ ಸಂಘ ಸಂಸ್ಥೆಗಳ ಸದಸ್ಯತ್ವ ಹೊಂದಿದ್ದರೆ ಅಪೇಕ್ಷಣೀಯ.

ಅಭ್ಯರ್ಥಿಗಳು ಆರೋಗ್ಯವಂತರಾಗಿರಬೇಕು. ಯಾವುದೇ ತೀವ್ರತರ ಅನಾರೋಗ್ಯ / ವಾಸಿಯಾಗದ ಖಾಯಿಲೆಯಿಂದ ಬಳಲುತ್ತಿರಬಾರದು.

ಅಭ್ಯರ್ಥಿಯು ಯಾವುದೇ ನಿಷೇದಿತ ಸಂಘ ಸಂಸ್ಥೆಗಳ ಸದಸ್ಯರಾಗಿದ್ದಲ್ಲಿ ಅಥವಾ ಯಾವುದೇ ಕ್ರಿಮಿನಲ್ ಕೃತ್ಯಗಳಲ್ಲಿ ಭಾಗಿಯಾಗಿದ್ದಲ್ಲಿ ಮತ್ತು ದೇಶ ದ್ರೋಹ ಚಟುವಟಿಕೆಗಳಲ್ಲಿ ನೇರವಾಗಿ / ಪರೋಕ್ಷವಾಗಿ ಪಾತ್ರ ಹೊಂದಿದ್ದಲ್ಲಿ ಅವರನ್ನು ಪರಿಗಣಿಸುವಂತಿಲ್ಲ.

ಹಿಂದೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಬೇರೆ ಬೇರೆ ಇಲಾಖೆ/ಮಂಡಳಿ/ಫೆಡರೇಷನ್‌ನಿಂದ ಯಾವುದೇ ಸರ್ಕಾರಿ ಪ್ರಾಯೋಜಿತ ವಿದೇಶ ಅಧ್ಯಯನ ಪ್ರವಾಸ ಕೈಗೊಂಡಿದ್ದಲ್ಲಿ ಅವರನ್ನು ಮತ್ತೆ ಈ ವಿದೇಶ ಪ್ರವಾಸಕ್ಕೆ ಶಿಫಾರಸ್ಸು ಮಾಡುವಂತಿಲ್ಲ. ಜಿಲ್ಲೆಯಿಂದ ಶಿಫಾರಸ್ಸು ಮಾಡುವ ರೈತರ ಪಟ್ಟಿಗೆ ಅಂತಿಮವಾಗಿ ಸರ್ಕಾರದಿಂದ ಅನುಮೋದನೆ ಆಗಬೇಕಾಗಿದ್ದು ಸರ್ಕಾರದಿಂದ ಅನುಮೋದನೆ ಆಗುವವರೆಗೆ ರೈತರ ಪಾಲಿನ ವಂತಿಗೆಯನ್ನು ಸ್ವೀಕರಿಸಬಾರದು.

ಸರ್ಕಾರದಿಂದ ಆಯ್ಕೆಯಾದ ರೈತರು ಪ್ರವಾಸಕ್ಕೆ ಹೊರಡುವ ಮುನ್ನ ನಿಗಧಪಡಿಸಿದ ವಂತಿಗೆ ಹಣವನ್ನು ಪಾವತಿಸಬೇಕಾಗುತ್ತದೆ. ರೈತರ ವಂತಿಗೆ ಹಣವನ್ನು ಅವರ ಪ್ರವಾಸದ ವೆಚ್ಚಕ್ಕೆ ಸರಿದೂಗಿಸಲಾಗುವುದು.

ಆಯ್ಕೆ ಮಾಡುವಂತಹ ರೈತರು ಕಡ್ಡಾಯವಾಗಿ ಕನಿಷ್ಠ 6 ತಿಂಗಳು ವ್ಯಾಲಿಡಿಟಿ ಇರುವ ಪಾಸ್‌ಪೋರ್ಟ್‌ನ್ನು ಹೊಂದಿರಬೇಕು.

ಊ) ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ ಯೋಜನೆಯ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಉಪಯೋಜನೆ ಭಾರತ ಸರ್ಕಾರ ನವದೆಹಲಿಯಿಂದ ರೈತರಿಗೆ ವಿದೇಶ ಅಧ್ಯಯನ ಪ್ರವಾಸ ಕಾರ್ಯಕ್ರಮಕ್ಕಾಗಿ ಅನುಮೋದನೆಗೊಂಡ ವಾರ್ಷಿಕ ಗುರಿಯಂತೆ ಹಾಗೂ ಟೆಂಡರ್‌ನಲ್ಲಿ ಅನುಮೋದನೆಯಾದ ದರಕ್ಕೆ ಅನುಗುಣವಾಗಿ ಖರ್ಚು ಭರಿಸಲಾಗುವುದು. ಈತನಕ ಈ ಕೆಳಕಂಡಂತೆ ಖರ್ಚು ಭರಿಸಲಾಗಿರುತ್ತದೆ.

ಕ್ರಮ ಸಂಖ್ಯೆ	ವರ್ಷ	ಖರ್ಚಿನ ವಿವರ (₹ ಲಕ್ಷಗಳಲ್ಲಿ)
1	2011–12	48.99
2	2012–13	105.98
3	2013–14	54.51
4	2014–15	–

ಋ) ಈ ಯೋಜನೆಯನ್ನು 2010–11 ನೇ ಸಾಲಿನಿಂದ ಪ್ರತಿ ವರ್ಷ ನಿಯಮಾನುಸಾರ ಅನುಮೋದಿತ ವಾರ್ಷಿಕ ಕ್ರಿಯಾ ಯೋಜನೆಯಂತೆ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಟೆಂಡರ್ ಪ್ರಕ್ರಿಯೆಯು ಪ್ರಗತಿ ಹಂತದಲ್ಲಿದ್ದು, ದರ ಅನುಮೋದನೆಯಾದ ನಂತರ ರೈತರನ್ನು ವಿದೇಶ ಅಧ್ಯಯನ ಪ್ರವಾಸಕ್ಕೆ ಕಳುಹಿಸಲು ಕ್ರಮ ಕೈಗೊಳ್ಳಲಾಗುವುದು.